ಇಲ್ಲವೆಂದು ಅವನು ಸುಮಕ್ಕನಿಗೆ ಹೇಳಿ ನಂಬಿಸಿದ. ಪಕ್ಷದಲ್ಲಿ ಮಹಿಳಾ ಪ್ರಾತಿನಿಧ್ಯ ಕಡಿಮೆಯೆಂದು, ಸಮರ್ಥರಾದ ಮಹಿಳೆಯರು ಈಗಿಲ್ಲವೆಂದು ಹೇಳಿದ. ಹಾಗೆ ಸುಮಕ್ಕ ಬಲೆಯಲ್ಲಿ ಬಿದ್ದರು.

ಅಂಕಲ್ ಮತ್ತು ಸುಮಕ್ಕ ಒಂದೇ ಕಾಲದಲ್ಲಿ ಕಾಲೇಜಿನಲ್ಲಿ ಓದಿದವರಾಗಿದ್ದರು. ಅಂಕಲ್‌ನ ಪ್ರಸನ್ನವಾದ ಮುಖಭಾವ, ದಪ್ಪನೆಯ ಮೀಸೆಯ ಕೆಳಗೆ ಜಿನುಗುವ ವಶೀಕರಣ ಮುಗುಳ್ನಗೆಯೇ ಸುಮಕ್ಕನನ್ನು ಆಕರ್ಷಿಸಿದ್ದೆಂದು ಕೇಳಿದ್ದೆ. ಕಾಲೇಜಿನ ಬಹುತೇಕ ಎಲ್ಲಾ ಹೀರೋಗಳಿಗಿರುವಂತೆ ಅಂಕಲ್‌ಗೂ ಸಾಕಷ್ಟು ಅಭಿಮಾನಿಗಳಿದ್ದರು.

ಸುಮಕ್ಕನ ಹಿಂದೆ ನಡೆಯುತ್ತಿದ್ದ ಅದೇ ವಿದ್ಯಾರ್ಥಿ ಸಂಘಟನೆಯ ಚಂದ್ರವಾರಿಯರ್ ಎಂಬ ನಾಯಕನನ್ನು ನಿರ್ಲಕ್ಷಿಸಿ ಅವರು ಅಂಕಲ್‌ನನ್ನು ಸ್ವಯಂವರ ಮಾಡಿಕೊಂಡರು. ಚಂದ್ರವಾರಿಯರ್ ಈಗ ಪಕ್ಷದ ಹಿರಿಯ ನಾಯಕನಾಗಿದ್ದಾನೆ. ಚಂದ್ರವಾರಿಯರ್ ಅವರ ದಲ್ಲಾಳಿಯಾಗಿ ಫ್ರೆಡ್ಡಿ ಒಂದು ಗಾಡಿ ತುಂಬಾ ವಿಷಬೀಜಗಳೊಂದಿಗೆ ನಮ್ಮ ಊರಿಗೆ ಬಂದಿದ್ದ. ಒಬ್ಬ ತಲೆಹಿಡುಕನ ನಗುವನ್ನು ಪ್ರದರ್ಶಿಸುತ್ತಾ ಎಲ್ಲರೊಂದಿಗೆ ಮಾತನಾಡುತ್ತಾನೆ.

ರಾಜಧಾನಿ ನಗರದಲ್ಲಿ ಏರ್ಪಡಿಸಿದ್ದ ಒಂದು ಪ್ರಮುಖ ಮೀಟಿಂಗ್‌ಗೆ ಸುಮಕ್ಕನಿಗೆ ಆಹ್ವಾನ ಬಂದಿತ್ತು. ಅಂಕಲ್‌ಗೆ ಈ ತನಕ ಅಂತಹದೊಂದು ಆಹ್ವಾನ ಬಂದಿರಲಿಲ್ಲ. ತನ್ನ ಘನತೆಯನ್ನು ಕುಗ್ಗಿಸಲು ತನ್ನ ಹೆಂಡತಿಯನ್ನೇ ಚಂದ್ರವಾರಿಯರ್ ಆಯುಧವನ್ನಾಗಿ ಮಾಡುತ್ತಿದ್ದಾನೆಯೇ ಎಂದು ಅಂಕಲ್‌ಗೆ ಅನಿಸಿರಬೇಕು. 'ಸುಮ, ನೀನು ಹೋಗಬಾರದು. ನನ್ನ ಮೇಲೆ ಸ್ವಲ್ಪವಾದರೂ ಪ್ರೀತಿಯಿದ್ದರೆ ಈ ಆಹ್ವಾನವನ್ನು ಸ್ವೀಕರಿಸಬಾರದು' 'ಂದು ಅಂಕಲ್ ದುಂಬಾಲು ಬಿದ್ದರು.

'ನಾನು... ನಾನು ಹೋಗುತ್ತೇನೆ...' ಹಟಕ್ಕೆ ಬಿದ್ದಂತೆ ಸುಮಕ್ಕ ಗಟ್ಟಿಧ್ವನಿಯಲ್ಲಿ ಘೋಷಿಸಿದರು. ಸುಮಕ್ಕನ ಹೊಸ ಮುಖದ ಪರಿಚಯ ನನಗಾಗಲಿಮ ಶ್ರೀದೇವಿಗಾಗಲಿ, ಅಂಕಲ್‌ಗಾಗಲಿ ಇರಲಿಲ್ಲ. ಅಮ್ಮನ ಹಟಮಾರಿತನವನ್ನು ಕಂಡು ಶ್ರೀದೇವಿ ಗಟ್ಟಿಯಾಗಿ ಅತ್ತುಬಿಟ್ಟಳು. ಅಂಕಲ್ ಕೋಣೆಯೊಳಗೆ ಹೋಗಿ ಬಾಗಿಲು ಮುಚ್ಚಿದರು. ಆದರೆ ಮಾರನೆಯ ದಿನ ಬೆಳಗಿನಜಾವ ಸುಮಕ್ಕ ಡ್ರೈವರನ್ನು ಕರೆದುಕೊಂಡು ಅಂಬಾಸಡರ್ ಕಾರಿನಲ್ಲಿ ರಾಜಧಾನಿಗೆ ಹೋದರು. ಮೂರು ದಿನಗಳ ನಂತರ ಅವರು ಹಿಂತಿರುಗಿದರು.

ಆ ತನಕ ಅಂಕಲ್ ಮನೆಯಲ್ಲಿ ಕುಳಿತು ಕುಡಿದಿರಲಿಲ್ಲ. ಆ ಮೂರು ದಿನಗಳು ಅಂಕಲ್ ಗಾಂಧೀಜಿ ಮತ್ತು ನಾರಾಯಣ ಗುರುವಿನ ಫೋಟೊಗಳ ಮುಂದೆ ಕುಳಿತು ಗಟಗಟನೆ ಕುಡಿದರು. ವಿಶ್ವಸ್ಥನಾದ ಪರಮುಗೆ ಮಾತ್ರ ಆ ವಿಷಯ ಗೊತ್ತಿತ್ತು. ಪರಮು ಅಂಕಲ್‌ನ್ನು ಕೇಳಿಕೊಂಡು ಬಂದವರನ್ನೆಲ್ಲಾ 'ಅಂಕಲ್ ಇಲ್ಲ'ವೆಂದು ತಿರುಗಿ ಕಳುಹಿಸಿದ್ದ.

ಮರಳಿ ಬಂದ ಸುಮಕ್ಕ ಯಾವುದೋ ಪ್ರೇತ ಮೈಯನ್ನು ಹೊಕ್ಕಂತೆ ನಡೆದುಕೊಳ್ಳುತ್ತಿದ್ದರು. ನಾಯಕತ್ವದ ಅಮಲು ತಲೆಗೇರಿಸಿಕೊಂಡು ಅತ್ತಿಂದಿತ್ತ ಚಂದ್ರವಾರಿಯರ್ ತಂಡದ ಪರವಾಗಿ ಓಡಾಡಿದರು. ಹೊರಗೆ ತೋರ್ಪಡಿಸದಿದ್ದರೂ ಅಂಕಲ್ ಧೋರಣೆಗಳ ವಿಚಾರದಲ್ಲಿ ವಾರಿಯರ್‌ನ ವಿರುದ್ಧವಾಗಿದ್ದರು. ಅಂಕಲ್ ಮನೆಯೊಳಗೆ ತಪ್ಪು ತಪ್ಪು ಹೆಜ್ಜೆಗಳನ್ನಿಡುತ್ತಾ ಹಲವಾರು ಪದಾರ್ಥಗಳನ್ನು ಒಡೆದು ಬೀಳಿಸುತ್ತಿದ್ದರೆ, ಚಂದ್ರವಾರಿಯಾರ್ ಭಾಗವಹಿಸುತ್ತಿರುವ ಒಂದು ಗಂಭೀರ ಸಮ್ಮೇಳನದ ಪ್ರಚಾರಕ್ಕಾಗಿ ಸುಮಕ್ಕ ಹಗಲು ರಾತ್ರಿ ಓಡಾಡುತ್ತಿದ್ದರು.

ಸುಮಕ್ಕನಿಗೆ ಗಂಡ, ಮಗಳು, ಅಳಿಯನೊಂದಿಗೆ ಮಾತನಾಡಲು ಕೂಡ ಪುರುಸೊತ್ತು ಇಲ್ಲದಂತಾಯಿತು. ಮೊದಲ ಆಘಾತದಿಂದ ದಡ ಸೇರಿದ ಅಂಕಲ್ ಮಂಡಲ ಅಧ್ಯಕ್ಷ ಕುರ್ಚಿಗೆ ತಲುಪುವಷ್ಟರಲ್ಲಿ ಹಲವಾರು ಮಂದಿ ಎದುರು ಗುಂಪಿನ ಕ್ರಿಯಾಶೀಲ ಕಾರ್ಯಕರ್ತರಾಗಿ ಬದಲಾಗಿದ್ದರು. ಬ್ಯಾಂಕ್ ಮತ್ತು ಪಂಚಾಯತ್ ಆಡಳಿತ ತನ್ನಲ್ಲಿದ್ದುದರಿಂದ ಬಹಳಷ್ಟು ಮಂದಿಯನ್ನು ಜೊತೆಗಿರಿಸಲು ಸಾಧ್ಯವಾಗಿದ್ದು ಅದೃಷ್ಟವೆಂದೇ ಹೇಳಬೇಕು. ಪಕ್ಷದಲ್ಲಿ ಗ್ರೂಪಿಲ್ಲದೆ ಇರಲು ಸಾಧ್ಯವಿಲ್ಲವೆಂದು ಅರ್ಥಮಾಡಿಕೊಂಡ ಅಂಕಲ್, ಚಂದ್ರವಾರಿಯರ್‌ನ ಎದುರು ಗುಂಪಿನ ಸಮರ್ಥ ನಾಯಕರಾದರು.

ನಾನು ಯುವಜನ ವಿಭಾಗದ ನಾಯಕನಾಗಿದ್ದುದರಿಂದ ನನಗೋಸ್ಕರ ಹಗ್ಗಜಗ್ಗಾಟ ನಡೆಯುತ್ತಿತ್ತು. ಅಂಕಲ್ ತನ್ನ ನೋವಿನ ಕಥೆಗಳ ಕೊನೆಯಲ್ಲಿ ಬಿಕ್ಕಿ ಬಿಕ್ಕಿ ಅಳುತ್ತಿದ್ದರು. ಸುಮಕ್ಕನದು ಫ್ಯಾಂಟಸಿ ಕಥೆಗಳಂತಿರುವ ಭರವಸೆಗಳು.

'ಈ ಹಾಳಾದ ರಾಜಕೀಯ, ಗ್ರೂಪು ಯಾವುದೂ ನಮಗೆ ಬೇಡ' ಎಂದು ಶ್ರೀದೇವಿ ಹೇಳಿದಳು. ನಾನು ಹಾಗೆಯೇ ತೀರ್ಮಾನಿಸಿದೆ.

ವಿರೋಧಪಕ್ಷಗಳಿಗಿಂತಲೂ ಹೆಚ್ಚಿಗೆ ವೈರತ್ವ ಒಂದೇ ಪಕ್ಷದ ಗ್ರೂಪುಗಳಲ್ಲಿತ್ತು. ಗ್ರೂಪುಗಳು ಹಾವು ಮುಂಗುಸಿಗಳಾಗಿ ಕಚ್ಚಾಡುತ್ತಿದ್ದವು. ಪಕ್ಷಗಳು ಪರಸ್ಪರ ನಾಯಿ ಬೆಕ್ಕುಗಳಂತೆ ಹೋರಾಡುತ್ತಿದ್ದವು. ಫ್ರೆಡ್ರಿಕ್ ಥಾಮ್ಸನ್ ಬರುವ ದಿನ ನಾರದನ ಲ್ಯಾಂಡಿಂಗ್‌ನಂತಹ ಅನುಭವವುಂಟಾಗುತ್ತದೆ. ಹೊಡೆದಾಟ, ಬೈಗಳಗಳ ಸುರಿಮಳೆ ಅಥವಾ ರಾತ್ರೆಯಲ್ಲಿ ಕದ್ದು ನಿಂತು ಹೊಡೆಯುವುದು... ಏನಾದರೊಂದು ನಡೆದಿರುತ್ತದೆ. ಹಿಂತಿರುಗುವಾಗ ವ್ಯಂಗ್ಯ ಮಂದಹಾಸ ಚೆಲ್ಲುತ್ತಾ ಕಪ್ಪು ಕನ್ನಡಕದ ಹಿಂದಿನಿಂದ ದ್ವೇಷ ಕಾರುತ್ತಿರುತ್ತಾನೆ.

ಅಂಕಲ್ ಮತ್ತು ಸುಮಕ್ಕ ನನ್ನನ್ನು ಜೊತೆಗಿರಿಸುವ ಶ್ರಮದಿಂದ ಹಿಂದೆ ಸರಿದರು. ಆಗಲೇ ಗೊತ್ತಾಗಿದ್ದು. ಗ್ರೂಪಿನಲ್ಲಿ ಸೇರದೆ ಇದ್ದರೆ ಏನೆಲ್ಲಾ ದುರಂತಗಳು ನಡೆಯುತ್ತದೆಂದು. ಎರಡೂ ಗ್ರೂಪಿನ ವಿರೋಧ ಸಂಪಾದಿಸುವುದೇ ಅದರ ಪ್ರತಿಫಲ. ಅಂಕಲ್ ಮತ್ತು ಸುಮಕ್ಕ ನಮ್ಮನ್ನು ಸಮಾನವಾಗಿ ದ್ವೇಷಿಸಿದರು. ಇಬ್ಬರ ಊಹೆ, ನಾವು ಎದುರು ಗ್ರೂಪಿಗೆ ಸೇರಿದವರೆಂದು.

ಅಂಕಲ್ ಮತ್ತು ಸುಮಕ್ಕ ಒಟ್ಟಿಗೆ ಮುಂದಿನ ಕಾರ್ಯಕ್ರಮಕ್ಕೆ ಸಜ್ಜಾಗಿದ್ದರು. ನನ್ನನ್ನು ಮತ್ತು ಶ್ರೀದೇವಿಯನ್ನು ಬೇರ್ಪಡಿಸಿ ಒಬ್ಬರನ್ನಾದರೂ ತಮ್ಮ ಜೊತೆ ನಿಲ್ಲಿಸುವ ಪ್ರಯತ್ನ ನಡೆದಿತ್ತು. ಯುವಜನ ನಾಯಕ ಜೊತೆಗೆ ಸಿಕ್ಕಿದರೆ ಅಂಕಲ್‌ನ ಲುಕ್ಸಾನು ಪರಿಹರಿಸಬಹುದೆಂದು ಸುಮಕ್ಕ, ಸುಮಕ್ಕನ ನಷ್ಟವನ್ನು ಪರಿಹರಿಸಲು ಶ್ರೀದೇವಿಯ ಮೂಲಕ ಮರಳಿ ಪಡೆಯಬಹುದೆಂದು ಅಂಕಲ್ ಊಹಿಸಿದರು.

'ದೇವೀ... ಬಿಟ್ಟು ಕೊಡಬಾರದು'.

'ಆದಷ್ಟು ಆಳವಾಗಿ ನಾವು ತಳವೂರೋಣಾರಿ'.

ಬಂಗ್ಲೆ ಇಬ್ಬರ ಹೆಸರಲ್ಲೂ ಇದ್ದುದರಿಂದ ಬಿಟ್ಟು ಹೋಗಲು ಹೇಳಲಿಲ್ಲ. ಆದರೆ ಒಂದು ದುರಂತ ನಡೆದುಹೋಯಿತು. ಮೇಲಿನ ಮಹಡಿ ಪೂರ್ತಿಯಾಗಿ ಉಪಯೋಗಿಸಲ್ಪಟ್ಟು ನಮ್ಮ ಸ್ಥಿತಿ ಗುರುತರಾವಸ್ಥೆಗೆ ತಲುಪಿತು. ಸುಮಕ್ಕ ಒಂದು ಕೋಣೆಯನ್ನು ಆಫೀಸು ಮಾಡಿದರು. ಮತ್ತೊಂದು ರೂಮನ್ನು ಅತಿಥಿಗಳಿಗಾಗಿ ಮೀಸಲಿಟ್ಟರು. ಅವರೆಡಕ್ಕೂ ಹೊರಗಿನಿಂದ ಏಣಿ ಮೆಟ್ಟಿಲುಗಳ ಮೂಲಕ ಪ್ರವೇಶ ನೀಡಲಾಯಿತು. ಬಂಗ್ಲೆಯ ಹಿಂದೆ ಹಳೆಯದೊಂದು ಮನೆಯಿತ್ತು. ಹಳೆಯ ಮನೆಯನ್ನು ಒಡೆದು ಸಿಕ್ಕಿದ ಮರಮಟ್ಟು ಹಾಗೂ ಇತರೆ ಸಾಧನಗಳನ್ನು ಬಳಸಿ ಬಂಗ್ಲೆಯೊಂದನ್ನು ಕಟ್ಟಲಾಗಿತ್ತು. ಹಾಗೆ ಕಟ್ಟುವಾಗ ಬೇಕಾದ ಸಾಮಗ್ರಿಗಳನ್ನು ಜತನದಿಂದಿರಿಸಲು ಹಾಗೂ ಉಳಿಯಲು ನಿರ್ಮಿಸಿದ ತಾತ್ಕಾಲಿಕ ಮನೆಯಾಗಿತ್ತದು. ಅದನ್ನು ಸ್ವಚ್ಛಗೊಳಿಸಿದರೆ ವಾಸಯೋಗ್ಯವನ್ನಾಗಿ ಮಾಡಬಹುದೆಂದು ನಿದ್ರಿಸದ ರಾತ್ರೆಯ ಕೊನೆಯ ಜಾವದಲ್ಲಿ ನಾನು ಮತ್ತು ಶ್ರೀದೇವಿ ನಿರ್ಧರಿಸಿದೆವು.

ಚಂದ್ರವಾರಿಯರನ್ನು ಸ್ವಾಗತಿಸಲು ಸಿಡಿಮದ್ದುಗಳು ಮತ್ತು ಹನ್ನೆರಡು ಆನೆಗಳು ಇದ್ದವು. ಚಂದ್ರವಾರಿಯರ್ ಬರುವಾಗ ಸಿನಿಮಾ ನಟಿಯನ್ನೂ ಕರೆದುಕೊಂಡು ಬಂದಿದ್ದರು. ಅದರಿಂದಾಗಿ ಊರಿಗೆ ಊರೇ ರ್‍ಯಾಲಿಗೆ ಹೋಗಿದ್ದತ್ತು. ಘೋಷಣಾ ಪ್ರವೀಣರನ್ನು ಫ್ರೆಡ್ಡಿ ಬಾಡಿಗೆಗೆ ಕರೆದುಕೊಂಡು ಬಂದಿದ್ದ. ಅಚ್ಚುಹಾಕಿಸಿದ ಘೋಷಣೆಗಳನ್ನು ಮೆರವಣಿಗೆಯಲ್ಲಿರುವವರಿಗೆ ವಿತರಿಸಲಾಯಿತು. ಫ್ರೆಡ್ಡಿಯ ಕಾರಿನ ಡಿಕ್ಕಿ ಮಿನಿಬಾರಾಗಿ ಬದಲಾಯಿತು. ಕಾರು ಬಾರಿಗೆ ಹೋಗಿ ಮರಳಿದವರು ಆವೇಶಭರಿತರಾಗಿದ್ದರು. ಅವರು ಅಚ್ಚು ಮಾಡಿದ್ದು, ಮಾಡದೇ ಇರುವ ಘೋಷಣೆಗಳನ್ನು ಕೂಗಿದಾಗ ಊರಿಗೆ ಊರೇ ಹುಚ್ಚೆದ್ದು ಕುಣಿಯಿತು. ಬ್ಯಾಂಕಿನೊಳಗೆ ಕುಳಿತು ಎಲ್ಲಾ ಘೋಷಣೆಗಳನ್ನು ನಾನು ಕೇಳಿಸಿಕೊಳ್ಳುತ್ತಿದ್ದೆ. ಚಂದ್ರವಾರಿಯರ್ ಮತ್ತು ಸುಮಕ್ಕನ ಹೆಸರುಗಳನ್ನು ಜೋಡಿಸಿ ಹೇಳುವುದನ್ನು ಕೇಳಿಸಿಕೊಂಡಾಗ ನನಗೆ ವಾಕರಿಕೆ ಬಂತು. ಸುಮಕ್ಕನ ಮೇಲೆ ನನಗೆ ಅಸಹ್ಯ ಮತ್ತು ದ್ವೇಷ ತೋರಿತು. ಬಂಗ್ಲೆಯ ಉಪ್ಪರಿಗೆಯ ಮೇಲೆ ಕುಳಿತು, ಚಿಕ್ಕವಳಿದ್ದಾಗ ಉಡುಗೊರೆಯಾಗಿ ಕೊಟ್ಟಿದ್ದ ಬೈನಾಕುಲರಿನ ಸಹಾಯದಿಂದ ಶ್ರೀದೇವಿಯೂ ಜಾಥಾ ಕಂಡಳಂತೆ. ಆದರೆ ಬೈನಾಕುಲರ್ ಘೋಷಣೆಗಳನ್ನು ಮುದ್ರೀಕರಿಸಲಿಲ್ಲ. ಆದರೂ ಮುಂದಿನ ವಾಹನದಿಂದ ಗಟ್ಟಿಯಾಗಿ ಕೂಗುತ್ತಲೇ ಇದ್ದರು.

(ಸಶೇಷ)